# ಮೌನ ಮಂಟಪ

■ ಡಿ.ಎನ್.ಗೀತಾ

## ಕೋಟೆ ಬಂಗಲೆಗೆ ಹೇಮಂತನ ಆಗಮನ

ಹೆಚ್ಚು ಉಪಚರಿಸಿಕೊಳ್ಳದೆ ಶನಿವಾರ ಸಂಜೆ ಬಂಗಲೆಗೆ ಬರಲು ಸಮ್ಮತಿಸಿದಳು ರಮ್ಯ. ಅವಳಿಗೂ ಒಮ್ಮೊಮ್ಮೆ ಪಿಜಿಯ ಒಂಟಿತನ ಅಸಹನೀಯವೆನಿಸತೊಡಗುತ್ತದೆ. ತಡವಾಯಿತೆಂದು ಹೊರಡಲು ಅನುವಾದ ಋತುವನ್ನು ಬೀಳ್ಕೊಟ್ಟಳು ರಮ್ಯ. ಅವಳು ಕಣ್ಣಿಂದ ಮರೆಯಾಗುವವರೆಗೂ ನೋಡುತ್ತಿದ್ದು ನಂತರ ಒಳಬಂದಳು. ಋತುವಿನ ಪ್ರೀತಿಗೊಂದು ರಹದಾರಿ ಸಿಕ್ಕಿದ್ದು ಅವಳಿಗೆ ಅತೀವ ಸಂತೋಷವನ್ನು ಕೊಟ್ಟಿತ್ತು.

ಋತು ಬಂಗಲೆಯ ಆವರಣಕ್ಕೆ ಬಂದು ಗಾಡಿಯನ್ನು ಪಾರ್ಕ್ ಮಾಡಿ ಬರುವಾಗಲೇ ಕಲಾವತಿ ಎದುರಾದರು. ಅವರು ಬಂಗಲೆಯ ಮುಂದಿನ ವಿಶಾಲವಾದ ಆವರಣದಲ್ಲಿ ವಾಕ್ ಮಾಡುತ್ತಿದ್ದರು. ಆಗಾಗ ಪಾದದ ನೋವು, ಮಂಡಿನೋವೆಂದು ಬಳಲುವ ಅವರು ವೈದ್ಯರ ಸಲಹೆಯಂತೆ ಸಂಜೆ ವಾಕ್ ಮಾಡುವ ಅಭ್ಯಾಸವನ್ನಿರಿಸಿಕೊಂಡಿದ್ದಾರೆ.

